ಒತ್ತಾಯಕ್ಕೆ ಅಪೂರ್ವ, ವಸುಮತಿ ಮನೆಗೆ ಹೊರಟು ನಿಂತರು.

## ಹಣ ತರಲು ಹೇಳಿದ ರಾಯರು

'ನಾಳೆ ಡಿಸ್ಚಾರ್ಜ್ ಮಾಡ್ತಾರಂತೆ ಅಪೂರ್ವ.. ಬರುವಾಗ ನನ್ನ ರೂಮಲ್ಲಿರೋ ಕಪಾಟಿನಲ್ಲಿರುವ ಹಣ, ಚೆಕ್‌ಬುಕ್ ತಗೊಂಡ್ಬಾ..' ರಾಯರು ನುಡಿದಾಗ ಅಪೂರ್ವಳಿಗೆ ಗಂಟಲಲ್ಲಿ ಏನೋ ಸಿಲುಕಿದಂತಾಗಿತ್ತು. ಇಂಥ ಬಿಕ್ಕಟ್ಟು ಇಷ್ಟು ಶೀಘ್ರವಾಗಿ ಎದುರಾಗಬಹುದೆಂದು ಅವಳು ಭಾವಿಸಿರಲಿಲ್ಲ. ಗೋಣಾಡಿಸಿ ಅಲ್ಲಿಂದ ನಿರ್ಗಮಿಸುವಾಗ ಬಾಗಿಲಲ್ಲಿ ಆದರ್ಶ ನಿಂತಿದ್ದ. ಅವನು ನಿಂತಲ್ಲೇ ರಾಯರ ಮಾತುಗಳನ್ನು ಆಲಿಸಿದ್ದ. ಅಲ್ಲಿಂದ ನಿರ್ಗಮಿಸುವಾಗ ಅಪೂರ್ವಳ ಮನದ ಗೊಂದಲವೂ ಅವನಿಗೆ ಅರಿವಾಗಿತ್ತು. ಅವನು ಕೋಣೆಯೊಳಗೆ ಹೋಗದೆ ಸರಿದು ನಿಂತಾಗ, ಅಪೂರ್ವ ಬಾಗಿಲನ್ನು ಸಮೀಪಿಸಿ ಎದುರಿಗಿದ್ದ ಆದರ್ಶನನ್ನು ದಿಟ್ಟಿಸಿದಳು. ಇಬ್ಬರಿಗೂ ಪರಸ್ಪರರ ಮನೋಭಾವ ಅರಿವಾಗಿತ್ತು.

'ಅಪೂರ್ವ ಒಂದು ನಿಮಿಷ ಬರ್ತೀರಾ..?' ಅವನು ಎರಡು ಹೆಜ್ಜೆ ಮುಂದೆ ಹೋದಾಗ, ವಸುಮತಿಗೆ ತಿಳಿಸಿ ಅಪೂರ್ವ ಅವನನ್ನು ಹಿಂಬಾಲಿಸಿದಳು.

'ಈಗೇನು ಮಾಡ್ತೀರಾ..?' ಆದರ್ಶ ಪ್ರಶ್ನಿಸಿದಾಗ, ತಾನು ಅವನನ್ನು ಅವಮಾನಿಸಿದರೂ ಅದನ್ನು ಮರೆತು ತನ್ನ ಕಷ್ಟಕ್ಕೆ ಸ್ಪಂದಿಸುತ್ತಿರುವ ಅವನ ಹೃದಯವಂತಿಕೆಗೆ ಅವಳು ಮೂಕಳಾದಳು.

'ಸೂರ್ಯ, ಹಣ ತಗೊಂಡು ಹೋದವನು ಮನೆಗೆ ಮರಳಿ ಬರ್ತಾನೆ ಅಂದ್ಕೊಂತೀರಾ..? ಇಲ್ಲಾ ..ಆಂಟಿ ನೋಡಿದ್ರೆ ತುಂಬಾ ಖುಷಿಲಿದ್ದಾರೆ. ಇಷ್ಟು ವರ್ಷಗಳ ನಂತರವಾದ್ರೂ ಮಗನ ಜೊತೆ ಇರಬಹುದು ಅನ್ನುವ ಖುಷಿ. ಆದ್ರೆ, ಈ ಸತ್ಯ ತಿಳಿದ್ರೆ ಅಂಕಲ್ ಆತನನ್ನು ಮನೇಗೆ ಸೇರಿಸಲ್ಲ. ಏನು ಮಾಡುವುದೋ ತೋಚ್ತಾ ಇಲ್ಲ' ತನ್ನ ಗೊಂದಲವನ್ನು ಅವನೆದುರು ಅರುಹಿದಳು.

'ಈಗಿರೋದು ಒಂದೇ ದಾರಿ' ಅವನೆಂದಾಗ ಅಪೂರ್ವ ಆತನ ಕಡೆಗೆ ಪ್ರಶ್ನಾರ್ಥಕವಾಗಿ ನೋಡಿದಳು.

'ಸೂರ್ಯನನ್ನು ಎಲ್ಲಿದ್ರೂ ಹುಡುಕೋದು.. ಅವ್ನ ಕೈಲಿ ಆ ಹಣ ಇರುತ್ತಲ್ವಾ.. ಅವನನ್ನು ಮನೆಗೆ ತರಲು ಹೇಗಿದ್ರೂ ಹುಡುಕಲೇ ಬೇಕು. ಅವ್ನು ಸಿಕ್ಕಿದ್ರೆ ಹಣನೂ ಸಿಗುತ್ತೆ.. ಈ ವಿಷ್ಯ.. ಇಲ್ಲಿಗೇ ಮುಗ್ದು ಹೋಗುತ್ತೆ' ಅವನ ಮಾತುಗಳನ್ನು ಮನಸ್ಸು ಅನುಮೋದಿಸಿದರೂ, ಅದು ಸುಲಭ ಸಾಧ್ಯವಲ್ಲ ವೆಂದು ತೋರಿತು. ತನ್ನ ಅನುಮಾನವನ್ನು ಅಪೂರ್ವ, 'ಇಷ್ಟು ದೊಡ್ಡ ಊರಲ್ಲಿ ಅವ್ನು ಎಲ್ಲಿದ್ದಾನೇಂತ ಹುಡುಕೋದು..? ಅವ್ನ ಮೊಬೈಲ್ ನಂಬರ್ ನನ್ಹತ್ರ ಇಲ್ಲ. ಪೊಲೀಸ್ ಸ್ಟೇಷನ್‌ಗೆ ಹೋಗಿ ತಿಳಿಸೋಣವೆಂದರೆ ನಿನ್ನೆಯಷ್ಟೇ ಅವನನ್ನು ಕಳ್ಳತನ ಮಾಡಿಲ್ಲ ಅಂತ ಹೊರಗೆ ಬಿಟ್ಟಿದ್ದಾರೆ. ತಿರ್ಗಾ ಮನೇಲೇ ಕಳ್ಳತನ ಮಾಡಿದ್ದಾನೆ ಅಂತ ನಾವೇ ಹೇಳಿ ಕೊಟ್ಟ ಹಾಗಾಗುತ್ತೆ' ಇಬ್ಬರೂ ದಿಕ್ಕು ತೋಚದವರಂತೆ, ಅಸಹಾಯಕರಾಗಿ ನಿಂತು ಬಿಟ್ಟರು.

## ಯೋಚನಾಮಗ್ನ ಅಪೂರ್ವ

ಸೂರ್ಯ ಮನೆಯ ಹಣ ತೆಗೆದುಕೊಂಡು ಹೋಗಿ ಒಂದು ದಿನವೇ ಕಳೆದಿದೆ. ಆ ಹಣವನ್ನು ಆತ ಏನು ಮಾಡಿದನೋ! ಆತ ಯಾವ ಪರಿಸ್ಥಿತಿಯಲ್ಲಿದ್ದಾನೋ.. ಆತನಿಗೆ ಕೆಟ್ಟ ಸಹವಾಸ ಇದೆ ಎಂದು ಆ ದಿನ ಮನೆಗೆ ಬಂದ ಪೊಲೀಸ್ ಹೇಳಿರಲಿಲ್ಲವೇ? ಅಂಥವರ ಸಂಗಡದಲ್ಲಿ ಹಣವನ್ನೆಲ್ಲಾ ನೀರು ಮಾಡಿಬಿಟ್ಟರೇನು ಗತಿ? ಮನೆಯಲ್ಲಿದ್ದ ಹಣ ಈಗ ಇಲ್ಲವೆಂದರೆ, ತಾನೇನು ಉತ್ತರ ಕೊಡುವುದು? ಯೋಚಿಸುತ್ತಲೇ ಅಪೂರ್ವಳಿಗೆ ತಲೆ ಬಿಸಿಯಾಗಿತ್ತು. ಅವಳ ತಳಮಳವನ್ನು ಅವಳ ಮುಖ ನಿರುಕಿಸುತ್ತ ಅರ್ಥೈಸಿಕೊಂಡ ಆದರ್ಶ, 'ನೀವು ಮೊದಲು ಮನೆಗೆ ಹೋಗಿ ಅವ್ನು ಬಂದಿದ್ದಾನಾ ನೋಡಿ.. ನಾನು ಬೇರೆ ಡ್ಯೂಟಿ ಡಾಕ್ಟರನ್ನು ಕರೆಸಿ ಅವ್ರಿಗೆ ಹ್ಯಾಂಡ್ ಓವರ್ ಮಾಡಿ ಬರ್ತೀನಿ. ಆಮೇಲೆ ಅವನನ್ನು ಹುಡುಕೋಣ..' ಎಂದ.

ಅವನು ತನ್ನ ಬೆಂಬಲಕ್ಕೆ ನಿಂತಿದ್ದನ್ನು ಕಂಡು ಅವಳಿಗೆಷ್ಟೋ ನೆಮ್ಮದಿಯಾಯಿತು.

'ನಿಮ್ಗೆ ತುಂಬಾ ಥ್ಯಾಂಕ್ಸ್ ಆದರ್ಶ.. ನಾನು ಚಿಕ್ಕಮ್ಮನನ್ನು ಮನೆಗೆ ಕರ್ಕೊಂಡು ಹೋಗ್ತೀನಿ.. ನೀವು ಮನೆ ಹತ್ರ ಬರುವಾಗ ಕರೆ ಮಾಡಿ..' ಎಂದು ತಿಳಿಸಿ ವಸುಮತಿಯೊಂದಿಗೆ ಮನೆಯ ಹಾದಿ ಹಿಡಿದಳು.

'ಯಾರೇ ಅವ್ನು..? ಅಷ್ಟೊಂದು ಮಾತನಾಡ್ತಿದ್ದೆ..?' ವಸುಮತಿ ಕೆದಕಿದಾಗ, 'ಅವ್ನು ವಿಜಯಮ್ಮನ ಸಂಬಂಧಿ.. ರಾಯರ ತಂಗಿ ಮಗನಂತೆ..'ಎಂದಷ್ಟು ನಿರಾಸಕ್ತಳಂತೆ ನುಡಿದಾಗ ವಸುಮತಿ ಮುಂದೆ ವಿಚಾರಿಸಲು ಹೋಗಲಿಲ್ಲ. ಎರಡು ತಾಸಿನಲ್ಲಿ ಆದರ್ಶ ಮನೆಯ ಸಮೀಪ ಬಂದು ಕರೆ ಮಾಡಿದ್ದ. ವಸುಮತಿಗೆ ತಿಳಿಸಿ, ಸೂರ್ಯ ಒಂದು ವೇಳೆ ಬಂದರೆ ತನಗೆ ಕರೆ ಮಾಡಿ ತಿಳಿಸಬೇಕೆಂದು ಹೇಳಿ ಅಪೂರ್ವ ಆದರ್ಶನೊಡನೆ ಅವನ ಕಾರಿನಲ್ಲಿ ಹೊರಟು ಬಿಟ್ಟಳು.

'ಅವನನ್ನು ಎಲ್ಲಿಂತ ಹುಡುಕೋದು..? ಬೆಂಗಳೂರಿನಂಥ ಮಹಾಸಾಗರದಲ್ಲಿ ಅವನೆಲ್ಲಿರ್ತಾನೇಂತ..?' ಆದರ್ಶ ಚಿಂತೆಯಿಂದ ನುಡಿದ.

'ನಾವು ಸ್ಟೇಶನ್‌ಗೆ ಹೋಗಿ ವಿಚಾರಿಸೋಣ.. ಆ ಇನ್ಸ್‌ಪೆಕ್ಟರ್‌ಗೆ ಏನಾದ್ರೂ ಮಾಹಿತಿ ಇರಬಹುದು... ಇವ್ನು ಹಣ ತಗೊಂಡು ಹೋಗಿರುವ ವಿಚಾರ ತಿಳಿಸೋದು ಬೇಡಾ.. ಸ್ಟೇಶನ್ನಿಂದ ಮನೆಗೆ ಬಂದಿಲ್ಲ..' ಅಂತ ಹೇಳಿದ್ರಾಯ್ತು. ಅಪೂರ್ವಳ ಸಲಹೆಗೆ ಆದರ್ಶ ತಲೆದೂಗಿದ.

'ಪರ್ವಾಗಿಲ್ಲಾರೀ.. ನಿಮ್ಮ ತಲೆನೂ ಚೆನ್ನಾಗಿ ಓಡುತ್ತೆ.. ಎಷ್ಟೆಂದರೂ ಭಾವೀ ಇಂಜಿನಿಯರ್ ಅಲ್ವಾ?' ಎಂದು ನಗೆಯಾಡಿದ. ಅಪೂರ್ವಳಿಗೆ ನಗುವ ಮನಸ್ಥಿತಿ ಉಳಿದಿರಲಿಲ್ಲ. ಸೂರ್ಯ ಸಿಕ್ಕಿ ಮನೆಗೆ ಮರಳಿ, ಒಯ್ದಿದ್ದ ಹಣ ಹಿಂದಿರುಗಿಸುವಂತಾದರೆ ಸಾಕು ಎನ್ನುವಂತಾಗಿತ್ತು. ಇಬ್ಬರೂ ಹಲಸೂರು ಸ್ಟೇಶನ್ ತಲುಪಿದರು. ಅಪೂರ್ವಳ ಪರಿಚಯ ಹಿಡಿದು ಆ ಇನ್ಸ್‌ಪೆಕ್ಟರ್, 'ಏನಮ್ಮ ಬಂದೆ ನೀನು..?' ಎಂದು ವಿಚಾರಿಸಿದರು.

ಅಪೂರ್ವ ವಿನೀತಳಂತೆ, 'ಸರ್.. ಸೂರ್ಯನನ್ನು ..ಅದೇ ಪ್ರಭಾಕರ ರಾಯರ ಮಗನನ್ನು ..ಬಿಟ್ಟು ಬಿಟ್ಟಿದ್ದೀರಾ ಸಾರ್?'

'ಹೌದಮ್ಮಾ... ಅವ್ನು ಈ ಕಳ್ಳತನದಲ್ಲಿ ಭಾಗಿ ಆಗಿರಲಿಲ್ಲ.. ಬೇರೆ ಹುಡ್ಗ ಶಾಮೀಲಾಗಿದ್ದಾಂತ ಗೊತ್ತಾಯ್ತು.. ಅವ್ನನ್ನು ನಿನ್ನೇನೇ ಬಿಟ್ಟಿದ್ದೇವಲ್ಲ...'

'ಆದ್ರೆ ಸರ್.. ಆತ ಮನೆಗೆ ಬಂದಿಲ್ಲ... ರಾಯರಿಗೆ ಹೃದಯಾಘಾತವಾಗಿ ಆಸ್ಪತ್ರೆಲಿದ್ದಾರೆ... ಮಗನನ್ನು ಕಾಣಲು ಹಂಬಲಿಸ್ತಿದ್ದಾರೆ... ಅವ್ರನ್ನ ಕರ್ಕೊಂಡು ಹೋಗೋಣಾಂತ ಬಂದ್ವಿ... ಇಲ್ಲಿ ನೋಡಿದ್ರೆ ಆತ ಕಾಣ್ತಾ ಇಲ್ಲ..' ಆತನ ಮುಂದೆ ಅಸಹಾಯಕತೆ ಪ್ರದರ್ಶಿಸಿದಳು.

## ಇಲ್ಲಿಯವರೆಗೆ



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಯರನ್ನು ನೋಡಲು ಶಿವಮೊಗ್ಗದಿಂದ ವಸುಮತಿ ಮತ್ತು ಶಂಕರ ಬರುತ್ತಾರೆ. ಇವರನ್ನು ನೋಡಿ ವಿಜಯಮ್ಮ 'ನೀವು ಯಾಕೆ ಬರೋದಕ್ಕೆ ಹೋದ್ರಿ, ಸುಮ್ಮನೆ ಖರ್ಚು' ಎನ್ನುತ್ತಾಳೆ. ಅಸಲಿಯಾಗಿ ಈಕೆಗೆ ಅವರೆಲ್ಲ ಬಂದದ್ದು ಇಷ್ಟವಾಗಿರುವುದಿಲ್ಲ.

ಅಪೂರ್ವಳಿಗೆ ಬೇಜಾರಾಗುವಂತೆ ಮಾಡಿದ್ದಕ್ಕೆ ಆದರ್ಶನಿಗೆ ಪಶ್ಚಾತ್ತಾಪವಾಗುತ್ತದೆ. ಹಲವು ಬಾರಿ ಕ್ಷಮೆ ಕೇಳುತ್ತಾನೆ. ಕೋಪದಿಂದಲೇ ಇದ್ದ ಅಪೂರ್ವಳ ಮನಸ್ಸು ಕೊನೆಗೆ ಕರಗುತ್ತದೆ. ಅವಳನ್ನು ಓಪಿಡಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡುತ್ತಾನೆ.